## ಜೈ ಹರಹರ ಮಹಾದೇವ

ಸ್ಟಾರ್ ಸುವರ್ಣ ವಾಹಿನಿಯಲ್ಲಿ ಸೋಮವಾರದಿಂದ ಶನಿವಾರದವರೆಗೆ ಪ್ರತಿ ದಿನ ಸಂಜೆ 7–30ಕ್ಕೆ ಪ್ರಸಾರವಾಗುವ 'ಹರಹರ ಮಹಾದೇವ' ಧಾರಾವಾಹಿಯು ಅದ್ಭುತವಾಗಿ ಮೂಡಿಬರುತ್ತಿದೆ. ಅದ್ದೂರಿ ಸೆಟ್‌ನಲ್ಲಿ ಚಿತ್ರೀಕರಣ ನಡೆಸಿ ಕಲಾನೈಪುಣ್ಯತೆಯನ್ನು ಮೆರೆದಿದ್ದಾರೆ. ಇಲ್ಲಿ ಪಾತ್ರವಹಿಸುತ್ತಿರುವ ಎಲ್ಲಾ ಪಾತ್ರಧಾರಿಗಳು ಉತ್ತಮವಾಗಿ ಅಭಿನಯಿಸುತ್ತಿದ್ದಾರೆ. ಒಂದು ಧಾರಾವಾಹಿಯು ಎಲ್ಲಾ ರೀತಿಯಲ್ಲೂ ಜನರ ಮನಸೂರೆಗೊಳ್ಳಲು ಬೇಕಾದ ಎಲ್ಲಾ ಅಂಶಗಳನ್ನು ಪರಿಗಣಿಸಿ ಚಿತ್ರೀಕರಿಸಿದ್ದಾರೆ. ಕೈಲಾಸ ಪರ್ವತ, ಕಾಡು ಝರಿಗಳ ಚಿತ್ರೀಕರಣ, ದಕ್ಷಮಹಾರಾಜನ ಅರಮನೆ, ವಸ್ತ್ರಾಭರಣ ಎಲ್ಲವೂ ಶ್ರೀಮಂತಿಕೆಯಿಂದ ಕೂಡಿದೆ.

ಬರೀ ಜಗಳ, ಮೋಸ, ಭೂತ ಇವುಗಳಿಂದ ಕೂಡಿದ ಧಾರಾವಾಹಿಗಳಿಗಿಂತ, ಇಂತಹ ಪೌರಾಣಿಕ ಹಿನ್ನೆಲೆಯ ಕತೆಯುಳ್ಳ ಧಾರಾವಾಹಿ ಶ್ರೀ ಶಿವನ ಮಹಿಮೆಯನ್ನು ಎತ್ತಿ ಸಾರುತ್ತಿದೆ. ಹಿನ್ನೆಲೆಯ ಸಂಗೀತ, ವಿವಿಧ ವಾದ್ಯಗಳು ಶ್ರೀಮಂತಿಕೆಯನ್ನು ಇನ್ನೂ ಹೆಚ್ಚಿಸಿವೆ. ಒಟ್ಟಿನಲ್ಲಿ 'ಹರಹರ ಮಹಾದೇವ' ಒಂದು ಹೊಸ ದಾಖಲೆಯನ್ನು ಸೃಷ್ಟಿಸುವಂತಾಗಲಿ.

—ಪದ್ಮಿನಿ ಗುರುನಾಥ ಹೆಗಡೆ, ಸೊರಬ, ಶ್ರೀನಾಥ್ ಕೊನೇಟಿ ಬೆಂಗಳೂರು

## ವಾರದ ಪತ್ರ

### ಹೇಡಿ ಕಥಾನಾಯಕ!

ಆಗ ಚಂದಮಾಮ, ಬಾಲಮಿತ್ರ, ಬೊಂಬೆ ಮನೆ ಮುಂತಾದ ನಿಯತಕಾಲಿಕಗಳಲ್ಲಿ ಸುಂದರವಾದ ಕತೆಗಳಿರುತ್ತಿದ್ದವು. ಕತೆಗೊಬ್ಬ ಕಥಾನಾಯಕ ಇರುತ್ತಿದ್ದ. ಕತೆಗೊಂದು ನೀತಿ ಇರುತ್ತಿತ್ತು. ಆ ಕತೆಗಳಿಂದ ನಾವು ಕಲಿಯುವ ವಿಷಯ ಬಹಳಷ್ಟಿತ್ತು.

ಈಗ ಟಿವಿಯಲ್ಲಿ ಬರುತ್ತಿರುವ ಧಾರಾವಾಹಿಗಳಲ್ಲಿ ಕಥಾನಾಯಕ ಇರುತ್ತಾನೆ. ನೋಡಲು ಕೆಂಪಗೆ, ಸುಂದರವಾಗಿರುತ್ತಾನೆ. ಆತನಿಗೆ ಮದುವೆಯಾಗಿರುತ್ತದೆ. ಜೊತೆಗೊಂದು ಅಕ್ರಮ ಸಂಬಂಧ ಇರುತ್ತದೆ. ವಿಪರ್ಯಾಸವೆಂದರೆ ಆತ ಗಂಡಸರಂತಿರುವುದಿಲ್ಲ. ಆತನ ಹಾವ – ಭಾವ, ನಡೆ – ನುಡಿ ಬೃಹನ್ನಳೆಯಂತಿರುತ್ತದೆ. ಆತ ಹೆಣ್ಣಿಗನಾಗಿರುತ್ತಾನೆ. ಸದಾ ಅಳುತ್ತಿರುತ್ತಾನೆ.ಆಶ್ಚರ್ಯವೆಂದರೆ ಈ ಧಾರಾವಾಹಿಗಳಲ್ಲಿರುವ ಮಹಿಳೆಯೇ ನಟ ಭಯಂಕರಿ ಆಗಿರುತ್ತಾಳೆ. ಭೂಗತ ಪಾತಕಿಗಿಂತಲೂ ಈ ಮಹಿಳೆ ಅಪಾಯಕಾರಿ. ನಿಮಿಷಾರ್ಧದಲ್ಲಿ ಈ ನಟೀಮಣಿಗಳು ಸುಪಾರಿ ನೀಡಿ 'ಐ ಪಿ ಸಿ' ಯಲ್ಲಿರುವ ಯಾವ ಅಪರಾಧ ಬೇಕಾದರೂ ಮಾಡ ಬಲ್ಲರು. ಹೆಂಗಸರಿಗೆಲ್ಲ ಗಂಡೆದೆ, ಗಂಡಸರಿಗೆಲ್ಲಾ ಹೆಣ್ಣಿನ ದಯಪಾಲಿಸಿ ಬೀಗುತ್ತಿರುವ ಎಲ್ಲ ಧಾರಾವಾಹಿಯ ನಿರ್ದೇಶಕರ ರೀತಿ ವಿಪರ್ಯಾಸ!

—ಪಿ. ಜೆ. ರಾಘವೇಂದ್ರ, ಮೈಸೂರು

## ಸುಪಾರಿ ಸೊಸೆಯಂದಿರು

ಗೂಂಡಾಗಿರಿ, ಮಹಿಳೆಯರ ಮೂಲಕ (ಲೇಡಿ ಬಾಸ್) ನಡೆಸಲ್ಪಡುತ್ತಿರುವ ಸುಪಾರಿ ಕೊಲೆ, ಆ ಲೇಡಿ ಬಾಸ್‌ಗೆ ಹೆದರಿ ನಡುಗುವುದು.. ಇತ್ತೀಚಿನ ಧಾರಾವಾಹಿಗಳಲ್ಲಿ ಬಲವಂತವಾಗಿ ತುರುಕುತ್ತಿದ್ದಾರೆ. ಮೂಲ ಕಥೆಯೇ ವೀಕ್ಷಕರಿಗೆ ಮರೆಯುವಂತಾಗಿದೆ. ಕೆಲವು ಉದಾಹರಣೆಗಳೆಂದರೆ ಕುಲವಧು – ಲೇಡಿಬಾಸ್ ಮತ್ತು ಅವಳ ಚೇಲಾಗಳು; ಮನೆ ದೇವರು– ತಾಯಿ– ಮಗಳೇ ಇಲ್ಲಿ ಲೇಡಿ ಬಾಸ್. ಅವರಿಗೊಬ್ಬ ಸುಪಾರಿ ಗೂಂಡಾ.

ಶಾಂತಿ ಕ್ರಾಂತಿ– ಇಲ್ಲೂ ಮನೆಯ ಸೊಸೆಯೇ ಗೂಂಡಾಗಳ ಮೂಲಕ ಭಾವ ಓರಗಿತ್ತಿಯನ್ನು ಕೊಲ್ಲಿಸಲು ಯತ್ನಿಸುತ್ತಾಳೆ. ಅಗ್ನಿ ಸಾಕ್ಷಿಯಲ್ಲಿಯೂ ಮನೆಯ ಹಿರಿಯ ಸೊಸೆ ಪರೋಕ್ಷ ಗೂಂಡಾಗಿರಿ ನಡೆಸುತ್ತಾಳೆ. ಸಹಾಯಕ ಹಳೇ ಪ್ರಿಯಕರ. ವಿಪರ್ಯಾಸವೆಂದರೆ ಮೇಲಿನ ಮೂರು ಧಾರಾವಾಹಿಗಳಲ್ಲೂ ಮನೆಯ ಸೊಸೆಯೇ ಗೂಂಡಾಗಳಿಗೆ ಸುಪಾರಿ ನೀಡುವುದು. ಹೆಣ್ಣುಮಕ್ಕಳು ವಿವಾಹವಾಗಿ ಗಂಡನ ಮನೆಗೆ ಬಂದಾಗ ಗೂಂಡಾಗಳ ದೂರವಾಣಿ ಸಂಖ್ಯೆಯನ್ನೂ ತರುತ್ತಾರೆಯೇ?

—ಶಾಂತಾ ನಾಗರಾಜ್ ಕೆ., ಬೆಂಗಳೂರು

## ಉತ್ತಮ ರಿಯಾಲಿಟಿ ಶೋ

ಝೀ ಕನ್ನಡ ವಾಹಿನಿಯ 'ಡ್ರಾಮಾ ಜ್ಯೂನಿಯರ್ಸ್' ಈವರೆಗೆ ನಾವು ನೋಡಿರುವ, ನೋಡುತ್ತಿರುವ ರಿಯಾಲಿಟಿ ಶೋಗಳಲ್ಲೇ ಅತ್ಯುತ್ತಮ ಕಾರ್ಯಕ್ರಮವಾಗಿದೆ.

ರಾಷ್ಟ್ರಕವಿ ಕುವೆಂಪುರವರ 'ಜಲಗಾರ' ದಂತಹ ಶ್ರೇಷ್ಠ ನಾಟಕವನ್ನು ಪುಟಾಣಿಗಳು ಪ್ರಸ್ತುತ ಪಡಿಸಿದ ಪರಿ, ಅವರ ಭಾವಪೂರ್ಣ ಅಭಿನಯ, ಹಾವಭಾವ ಯಾವ ವೃತ್ತಿ ನಾಟಕ, ಚಲನ ಚಿತ್ರಗಳ ನಟ– ನಟಿಯರಿಗೂ ಕಡಿಮೆ ಇರಲಿಲ್ಲ. ವಜ್ರಕ್ಕೆ ಸಾಣೆ ಹಿಡಿದಂತೆ ಈ ಮಕ್ಕಳ ಪ್ರತಿಭೆಯನ್ನು ತಿದ್ದಿ ತೀಡಿ, ಸೂಕ್ತ ತರಬೇತಿ ನೀಡುತ್ತಿರುವ ಗುರುಗಳ (ಮೆಂಟರು) ಶ್ರಮ, ಮಕ್ಕಳೊಡನೆ ಮಗುವಾಗುವ ನಿರೂಪಕ ಆನಂದ್‌ರ ಉತ್ಸಾಹ, ಮೃದು ಮಾತುಗಳಲ್ಲೇ ಮಕ್ಕಳಿಗೆ ಮಾರ್ಗದರ್ಶನ ಮಾಡುತ್ತಾ ನ್ಯಾಯಬದ್ಧ ತೀರ್ಪು ನೀಡುತ್ತಿರುವ ತ್ರಿಮೂರ್ತಿಗಳು, ಪೋಷಕರ, ವೀಕ್ಷಕರ ಪ್ರೋತ್ಸಾಹ ಎಲ್ಲವೂ ಅನನ್ಯ. ಇಂತಹ ಕಾರ್ಯಕ್ರಮಗಳ ಸಂತತಿ ಸಾವಿರವಾಗಲಿ.

—ಮೀರಾ ಮೋಹನ್, ಬೆಂಗಳೂರು; ಅಕ್ಷತಾ, ಉಜಿರೆ; ಧನ್ಯಶ್ರೀ, ಉಜಿರೆ

## ತಾರತಮ್ಯ ಸಲ್ಲದು

ಕಳೆದ ಶನಿವಾರ ಹಾಗೂ ಭಾನುವಾರ ಪ್ರಸಾರವಾದ ಝೀ ವಾಹಿನಿಯ ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್ ಕಾರ್ಯಕ್ರಮದಲ್ಲಿ ಗುರುಪ್ರಸಾದ್‌ರವರ ಹೇಳಿಕೆ ಗೊಂದಲಮಯವಾಗಿತ್ತು. ಬೆಳಗಾವಿ ತಂಡದವರು ಪ್ರದರ್ಶಿಸಿದ ಡಿಸ್ಕೋ ಡಾನ್ಸ್‌ನ ನೃತ್ಯದಲ್ಲಿ ಹಿಂದಿಯ ಭಾಷೆ ಇದ್ದುದರಿಂದ ಅವರಿಗೆ ಅತಿ ಕಡಿಮೆ ಅಂಕ (7) ನೀಡಿದರು. ಆದರೆ ಕುಡ್ಲ ಬಾಲಕಿಯರು ಪ್ರದರ್ಶಿಸಿದ ಬ್ಯಾಲೆ ನೃತ್ಯದ ಹಾಡು ಸಂಪೂರ್ಣ ಹಿಂದಿ ಹಾಡಾಗಿತ್ತು. ಅವರಿಗೆ ಭಾಷೆಯ ಬಗ್ಗೆ ಏನೂ ಹೇಳದೆ (10) ಅಂಕ ನೀಡಿದರು. ಇಲ್ಲಿ ನಾನು ತಂಡಗಳ ಬಗ್ಗೆ ಮಾತನಾಡುತ್ತಿಲ್ಲ. ಅವರ ಡಾನ್ಸ್ ಕಾರ್ಯಕ್ರಮ ಅದ್ಭುತವಾಗಿತ್ತು. ಆದರೆ ತೀರ್ಪುಗಾರರು ಖಂಡಿತವಾಗಿಯೂ ಎಡವಿದ್ದಾರೆ ಎಂದರೆ ತಪ್ಪಾಗಲಾರದು.

—ಎನ್. ಎಸ್. ಚಂದ್ರಶೇಖರ್, ಬೆಂಗಳೂರು

## ನಟರ ಧಾರಾವಾಹಿ

ಕಲರ್ಸ್ ಟಿ.ವಿ. ವಾಹಿನಿಯಲ್ಲಿ ರಾತ್ರಿ 9.30 ಕ್ಕೆ ಪ್ರಸಾರವಾಗುವ 'ಮನೆದೇವ್ರು' ಧಾರಾವಾಹಿಯಲ್ಲಿ ಕಲಾವಿದರ ನಟನೆ ಅತ್ಯಂತ ಸಹಜವಾಗಿದೆ. ಜಾನಕಿ, ಅನು, ಜಾನಕಿಯ ತಾಯಿ, ಅನು ತಂದೆ ಮುಂತಾದ ಎಲ್ಲಾ ಕಲಾವಿದರೂ ಉತ್ತಮವಾಗಿ ಅಭಿನಯಿಸಿದ್ದಾರೆ. ಆದರೆ ಹಿರಿಯ ಕೊರವಂಜಿಯ ಪಾತ್ರದಲ್ಲಿ ಅಭಿನಯಿಸುತ್ತಿರುವ ಕಲಾವಿದೆಯ ಪ್ರತಿಭೆ ಅತ್ಯಮೋಘ. ನಟನೆಯಲ್ಲಿನ ಅವರ ಹಾವ ಭಾವ, ಸಂಭಾಷಣೆಯ ರೀತಿಗಳಿಗೆ ಬೇರೆ ಯಾವ ಕಲಾವಿದರೂ ಸರಿಗಟ್ಟಲಾರರು.

ಎಚ್.ಎಸ್. ಶ್ರೀಮತಿ, ಬೆಂಗಳೂರು

## ಎಲ್ಲಿಗೆ ಬಂತೋ ಸಂಗಯ್ಯಾ ?

ಸ್ಟಾರ್ ಸುವರ್ಣದಲ್ಲಿ ಪ್ರಸಾರವಾಗುತ್ತಿದ್ದ ಗುಂಡ್ಯಾನ ಹೆಂಡ್ತಿ ಅಪರೂಪಕ್ಕೆಂಬಂತೆ ಉತ್ತರ ಕರ್ನಾಟಕದ ಭಾಷೆಯ ಸೊಗಡಿನಿಂದ ಉತ್ತರ ಕರ್ನಾಟಕದವರಾದ ನಮ್ಮನ್ನು ಸೆಳೆಯುತ್ತಿತ್ತು. ಎಲ್ಲಿದ್ದರೂ ಸಂಜೆಗೆ ಓಡಿ ಬಂದು ಟಿವಿಯ ಮುಂದೆ ಹಾಜರಾಗುತ್ತಿದ್ದೆವು. ಆದರೆ ಪಾತ್ರವರ್ಗದವರಿಗೆ ಬೈಲಹೊಂಗಲದ ಆ ವಾಡೆಯಲ್ಲಿರುವುದು ಸಾಕಾಗಿರಬೇಕು. ಅಮ್ಮಾಜಿ ಗುಂಡ್ಯಾ ಅಪಘಾತದಲ್ಲಿ ಸತ್ತನೆಂದು ತಿಳಿದು ಹೃದಯಾಘಾತಕ್ಕೊಳಗಾದರು. ಕಮಲಿ ಬೆಂಗಳೂರಿಗೆ ಹೋಗಲು ಅವಳ ಕಾಕಾ ನೆರವಾದ. ಈಗ ಸುನಂದ ಹುಚ್ಚಿಯಾಗಿ ಬೆಂಗಳೂರಿನ ಬಸ್ ಹತ್ತಿ ಬಂದು ಬೀದಿ ಸುತ್ತುತ್ತಿದ್ದಾಳೆ. ವಿಷ್ಣು ದೇಸಾಯಿಯೂ ಅಲ್ಲೇ ಪ್ರತ್ಯಕ್ಷರಾಗಿದ್ದಾರೆ. ಜೊತೆಗೆ ಗುಂಡ್ಯಾನೂ ಹಳ್ಳಿಯ ಸೊಗಡಿನ ಪರಿ ಬಿಚ್ಚಿ ಬೆಂಗಳೂರಿನಲ್ಲಿ ಆಧುನಿಕ ಸೋಗು ಹಾಕಿದ್ದಾನೆ. ಒಟ್ಟಾರೆ ಎಲ್ಲಿಗೆ ಬಂತೋ ಸಂಗಯ್ಯಾ ಅಂದ್ರೆ ಬೆಂಗಳೂರಿಗೆ ಬಂತೋ ನಿಂಗಯ್ಯಾ ಅನ್ನುವಂತಾಯ್ತು!

ಪ್ರಕಾಶ ಎಸ್.ಮನ್ನಂಗಿ, ಮೋಟೇಬೆನ್ನೂರು